# ಕರ್ತನ ಭೋಜನದ ಪ್ರಕಾರ

*"ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿಪಡಿಸುತ್ತೀರಿ" (1 ಕೊರಿಂಥ 11:26).*

ವಾರದ ಮೊದಲನೆಯ ದಿನದಲ್ಲಿ ಕ್ರೈಸ್ತರು ಕರ್ತನ ಭೋಜನದ ಆಚರಣೆಯನ್ನು ಮಾಡುವ ಒಂದು ವಿಶೇಷವಾದ ಅಲೌಕಿಕ ಸಂಗತಿಯು ಜರುಗುತ್ತದೆ, ಅದು ಕ್ರಿಸ್ತನ ಮರಣವನ್ನು ಕ್ರೈಸ್ತರೆಲ್ಲರೂ ಒಟ್ಟಾಗಿ ಪ್ರಚಾರ ಮಾಡುವ ಸಮಯವಾಗಿದೆ. ಆದ್ದರಿಂದ ಪೌಲನು, "ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿಪಡಿಸುತ್ತೀರಿ" ಅಂದನು. ಈ ಬೆಳಕಿನಡಿಯಲ್ಲಿ, ಕರ್ತನ ಭೋಜನವು ಎಷ್ಟು ಪರಿಶುದ್ಧವಾದದ್ದು ಎಂದು ಗಮನಿಸುತ್ತೇವೆ!

ನಾವುಗಳು ರೊಟ್ಟಿ ಮತ್ತು ಪಾತ್ರೆಯಲ್ಲಿ ಪಾಲುಗಾರರಾಗುವಾಗ, ಯೇಸುವಿನ ಮರಣದ ನೆನಪನ್ನು ಸಾರುತ್ತೇವೆ. ಆತನ ದೇಹದ ಸಮರ್ಪಣೆಯನ್ನು ಮತ್ತು ನಮ್ಮ ರಕ್ಷಣೆಗಾಗಿ ಆತನು ಸುರಿಸಿದ ರಕ್ತವನ್ನುನಮ್ಮ ನಂಬಿಕೆಯೆಂಬ ಕಣ್ಣಿನಿಂದ ನೋಡುತ್ತೇವೆ. ಕರ್ತನ ಭೋಜನವು ಅಧಿಕೃತ ಜ್ಞಾಪನವಾಗಿರುತ್ತದೆ.

ಹಾಗೂ ಇದರ ಮುಖಾಂತರ ನಾವುಗಳು ಕ್ರಿಸ್ತನ ಸನ್ನಿಧಿಯನ್ನು ಪ್ರವೇಶಿಸುತ್ತೇವೆ. ಆತನ ಅನ್ಯೋನ್ಯತೆಯಲ್ಲಿ ಊಟ ಮಾಡುತ್ತೇವೆ (ನೋಡಿರಿ ಮತ್ತಾಯ 26:29). ಈ ಸತ್ಯದಲ್ಲಿ ವೈಯಕ್ತಿಕವಾದ ಅನ್ಯೋನ್ಯತೆಯನ್ನು, ಆಂತರಿಕ ಹಾಗೂ ಬಾಹಿರವಾದ ಸಂಬಂಧವನ್ನು ಸಹ ಗಮನಿಸುತ್ತೇವೆ. ಕ್ರಿಸ್ತನೊಂದಿಗೆ ಅದ್ಭುತವಾದ ಅನ್ಯೋನ್ಯತೆಯ ಅನುಭವವನ್ನು ಹೊಂದುತ್ತೇವೆ.

ಆತನು ಬರುವವರೆಗೆ ಆತನ ಮರಣವನ್ನು ಜ್ಞಾಪಕ ಮಾಡುವವರಾಗಿರುತ್ತೇವೆ. ಆತನ ಮರಣವನ್ನು ಬಹಿರಂಗವಾಗಿ ಅರಿಕೆ ಮಾಡಬೇಕೆಂಬ ಆತನ ಅಪ್ಪಣೆಯನ್ನು ನೆರವೇರಿ ಸುವಾಗ, ನಾವು ಒಟ್ಟಾಗಿ ಆತನನ್ನು ಅರಿಕೆ ಮಾಡುತ್ತೇವೆ. ಆತನ ಮರಣವು ನಿಮ್ಮ ಪಾಪಗಳನ್ನು ನಿವಾರಣೆ ಮಾಡಿತು ಎಂದು ಲೋಕದ ಮುಂದೆ ಅರಿಕೆ ಮಾಡುತ್ತೇವೆ. ಉಳ್ಳದಿರುವ ಕಾಲದಲ್ಲೆಲ್ಲಾ, ಪ್ರಪಂಚದಾದ್ಯಂತ ಇರುವ ನಂಬಿಗಸ್ತರಾದ ಕ್ರೈಸ್ತರೆಲ್ಲರು ಪ್ರತಿ ಭಾನುವಾರ ಮುಂಜಾನೆಯ ಕರ್ತನ ಭೋಜನದಲ್ಲಿ - ಪಾಲುಗಾರರಾಗುವಾಗ - ಯೇಸು ಅವರಿಗಾಗಿ ಮರಣವನ್ನು ಹೊಂದಿದನು ಎಂದು ಸಾರಿ ಹೇಳುತ್ತಾರೆ. ಕರ್ತನು, ತನ್ನ ಈ ಭೋಜನವನ್ನು ಲೋಕದಲ್ಲಿ ಸಾಕ್ಷಿಯಾಗಿ ಬಿಟ್ಟು ಹೋಗಿದ್ದಾನೆ.

"ಸಾರು" ಎಂಬ ಪದದಲ್ಲಿ ಆದೇಶವು ಒಳಗೊಂಡಿದೆ. ಬಾಯಿಯಿಂದ ಪ್ರಚಾರ ಮಾಡು. ನಮ್ಮ ಪ್ರಾರ್ಥನೆಯಲ್ಲಿ, ಉದ್ದೇಶಗಳನ್ನು ನಾವು ಪುನರುಚ್ಛರಿಸುವಾಗ, ಆತನನ್ನು ಮೌನ ವಾಗಿ ನೆನಪು ಮಾಡುವಾಗ, ನಾವು ಕರ್ತ ಮರಣವನ್ನು ಪ್ರಚುರಪಡಿಸುತ್ತೇವೆ. ಹೊಸ ಒಡಂಬಡಿಕೆಯಲ್ಲಿ ಸುವಾರ್ತಾ ವಿಚಾರವನ್ನು ತಿಳಿಸುವಾಗೆಲ್ಲಾ ಸಾರು ಎಂಬ ಅರ್ಥವನ್ನು ನೀಡಲಾಗಿದೆ. ಕರ್ತನ ಭೋಜನದಲ್ಲಿ ಪಾಲ್ಗೊಳ್ಳುವ ಹಾಗೂ ಪುನರುತ್ಥಾನದ ಸುವಾರ್ತೆ ಯನ್ನು ಸಾರುತ್ತೇವೆ. ಪವಿತ್ರಾತ್ಮನು ಈ ವಾಕ್ಯಭಾಗದಲ್ಲಿ ವರ್ತಮನ ಕಾಲವನ್ನು ಆಯ್ಕೆ ಮಾಡಿಕೊಂಡಿರುವದರಿಂದ, ಅದು ಮುಂದುವರೆಯುವ ಕಾರ್ಯಕ್ಕೆ ಸೂಚನೆಯಾಗಿದೆ. ಪ್ರತಿ ಭಾನುವಾರವೂ ವರ್ಷ ಪೂರ್ತಿಯಾಗಿ, ಹಾಗೂ ಯುಗದ ಸಮಾಪ್ತಿಯವರೆಗೆ ಸಾರೋಣ ವಾಗಲೇ ಬೇಕು. ಆ ಭೋಜನ ಮಾಡುವಾಗೆಲ್ಲಾ, ಪ್ರಚಾರವು ಮುಂದುವರೆಯುತ್ತದೆ. ಅದು ಮೂರು ಮಾರ್ಗವಾಗಿ ಹರಿಯುತ್ತದೆ.

## ನಮ್ಮ ಸ್ವಂತ ಹೃದಯಗಳಿಗೆ

*ನಾವು ನಮ್ಮ ಹೃದಯಗಳಿಗೆ ಸಾರುತ್ತೇವೆ.* ಕರ್ತನ ಭೋಜನದಲ್ಲಿ ಪಾಲುಗರರಾಗುವಾಗ, ಕರ್ತನ ದೇಹ ಹಾಗೂ ರಕ್ತದ ಮೂಲಕ ರಕ್ಷಣೆಯನ್ನು ಪಡೆದೆವೆಂದು ಬೋಧಿಸಿಕೊಳ್ಳುತ್ತೇವೆ. ಈ ಸಂಸ್ಕಾರದಲ್ಲಿ ಮಾನಸಿಕವಾದ ಅರ್ಥವು ಅಡಕವಾಗಿದೆ. ರೊಟ್ಟಿ ಮತ್ತು ದ್ರಾಕ್ಷಾರಸವನ್ನು ತೆಗೆದುಕೊಳ್ಳುವಾಗ, ಪಾಪ ಪರಿಹಾರಕ ಯಜ್ಞವನ್ನು ನೆನಪುಮಾಡುತ್ತೇವೆ. ಅದನ್ನು ತೆಗೆದುಕೊಳ್ಳುವದರಿಂದ ನಾವುಗಳು ಬದುಕದೆ; ದೇವರ ಕ್ರಿಯೆಗಳಿಗೆ ವಿಧೇಯರಾಗಿ, ಆತ್ಮೀಕ ಅನ್ಯೋನ್ಯತೆಯನ್ನು ಹೊಂದುತ್ತೇವೆ.

## ಪಸ್ಪರ ಹೃದಯಿಗಳಿಗೆ

*ಇತರರ ಹೃದಯಗಳಿಗೆ ಸಾರುತ್ತೇವೆ.* ಇದು ಸಭೆಯಲ್ಲಿ ಜರುಗುವ ಒಂದು ಕ್ರಿಯೆಯಾಗಿದೆ. ಹಾಗೂ ದೇವರ ಮಕ್ಕಳ ಒಗ್ಗೂಡುವಿಕೆಯೂ ಆಗಿರುತ್ತದೆ. ಈ ಸಂಸ್ಕಾರದಲ್ಲಿ ಯೇಸುವಿನ ಆತ್ಮೀಕ ದೇಹವನ್ನು, ದೈಹೀಕ ದೇಹವನ್ನು, ಆತನ ಶಿಲುಬೆಯ ಯಜ್ಞವನ್ನು ನೆನಪು ಮಾಡುವದೇ ಆಗಿರುತ್ತದೆ. ಆಂತರಿಕವಾದ, ಬಾಹಿರವಾದ, ಹಾಗೂ ಮೇಲ್ಮುಖವಾದ ಆರಾಧನೆಯಾಗಿರುತ್ತದೆ. ನಾವು ನಮ್ಮೊಂದಿಗೂ, ಪರಸ್ಪರರೊಂದಿಗೂ ನಮ್ಮ ರಕ್ಷಕನೂ ಹಾಗೂ ದೇವರೊಂದಿಗೂ ಮಾತನಾಡುತ್ತೇವೆ. ನಾವು ಪರಸ್ಪರರೊಂದಿಗೂ, ಹೌದು ಯೇಸು ನನಗಾಗಿ ಮರಣ ಹೊಂದಿದನು, ತನ್ನ ಮರಣದ ಮೂಲಕ ನಮ್ಮನ್ನು ತನ್ನ ದೇಹಕ್ಕೆ ಸೇರಿಸಿಕೊಂಡನು ಎಂದು ನಂಬುತ್ತೇವೆ.

## ಕ್ರಿಸ್ತನನ್ನರಿಯದ ಹೃದಯಗಳಿಗೆ

*ಅನ್ಯರ ಹೃದಯಗಳಿಗೆ ಕರ್ತನ ಮರಣದ ಕುರಿತು ಸಾರುತ್ತೇವೆ.* ಕರ್ತನ ಭೋಜನದ ಮೂಲಕ, ಒಬ್ಬ ಪಾಪಿಯು ತನ್ನ ಹೃದಯದಲ್ಲಿ, ಯೇಸು ಲೋಕದ ರಕ್ಷಕನೆಂದು ನೆನಪು ಮಾಡುತ್ತಾನೆ. ಆ ಭೋಜನವು ಲೋಕಕ್ಕೂ ಮತ್ತು ಸಭೆಗೂ ನೆನಪಿಡುವ ಸಂಗತಿಯಾಗಿದೆ. ಭೋಜನದಲ್ಲಿ ಪಾಲುಗಾರರಾಗುವಾಗ, ಕರ್ತನ ಮರಣವು ಪ್ರಸಾರವಾಗುತ್ತದೆ. ವಾರದ ಮೊದಲನೆಯ ದಿನದ ಈ ಆಚರಣೆಯಲ್ಲಿ ಆತನ ಮರಣವನ್ನು ಆತನು ಬರುವವರೆಗೆ ನಂಬಿಗಸ್ತಿಕೆಯೆಂದು ಮುಂದುವರೆಸುವ ಕಾರ್ಯವಾಗಿರುತ್ತದೆ.

## ಮುಕ್ತಾಯ

ರೊಟ್ಟಿ ಮತ್ತು ಪಾತ್ರೆಯಲಿಲ ಪಾಲುಗಾರರಾಗಿ, ಆತನ ಮರಣವನ್ನು ಅಪೊಸ್ತಲರು ನೆನಪುಮಾಡಬೇಕು ಎಂದು ಹೇಳಿದ ನಂತರ ಮುಂದೆ ಆತನಿಗೆ ಬರಲಿದ್ದ ಮರಣವನ್ನು ಆತನು ಸಾರಿದನು. ಆತನ ಕ್ರಿಯೆಯು ಪ್ರಕಟನೆಯಿಂದಲೂ ನಿರೀಕ್ಷೆಯಿಂದಲೂ ಕೂಡಿದ್ದಾಗಿತ್ತು, ಆತನ ಭೋಜನದಲ್ಲಿ ಪಾಲುಗಾರರಾಗುವಾಗ ಮಿಕ್ಕಾದ ವಿಚಾರಗಳಿಗಿಂತ ಆತನ ಮರಣವೇ ಮಹತ್ವದ್ದು ಎಂದು ಪ್ರಚುರಪಡಿಸುತ್ತೇವೆ ಆತನ ಐತಿಹಾಸಿಕ ಮರಣವನ್ನೆ ನೆನಪು ಮಾಡುತ್ತೇವೆ. ಹೌದು ಆತನ ಬರೋಣದವರೆಗೆ ಕರ್ತನ ಭೋಜನದಲ್ಲಿ, ಆತನ ಮರಣವನ್ನೇ ಸಾರುತ್ತೇವೆ.

---

*"ಅವನ ಮಾತಿಗೆ ಒಪ್ಪಕೊಂಡವರು ದೀಕ್ಷಾಸ್ನಾನಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು. ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" (ಅಪೊಸ್ತಲರ ಕೃತ್ಯಗಳು 2:41, 42).*

*"ಆತನು ಬರುವವರೆಗೆ ಆತನ ಮರಣವನ್ನು" ಎಂಬ ಹೇಳಿಕೆಯಲ್ಲಿ ಭೋಜನದ ಕುರಿತು ಮೂರು ಅಂಶಗಳು ಅಡಕವಾಗಿದೆ. ಯೇಸುವಿನ ಶಿಲುಬೆಯ ಮರಣವು ಸುವಾರ್ತೆಗೆ ಬುನಾದಿಯಾಗಿದ್ದು, ಅದು ಹೊಸ ಒಡಂಬಡಿಕೆಯ ಸ್ಥಾಪನೆಯಾಗಿದೆ. ಆತನು ಬರುವವರೆಗೆ ಅಂದರೆ, ಕ್ರೈಸ್ತರಿಗಿರುವ (ಭವಿಷ್ಯದ) ನಿರೀಕ್ಷೆ ಎಂಬ ಅರ್ಥವಾಗಿದೆ. ಅದು ಕರ್ತನ ಜೀವವುಳ್ಳ ಪ್ರಭುತ್ವದ ಪ್ರಕಟನೆಯಾಗಿದೆ."*[1]

---

**ಟಿಪ್ಪಣಿ**

[1]Fred Fisher, *Commentary on 1 & 2 Corinthians* (Waco, Tex.: Word Books, 1975), 187.